**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No.326/2023**

**PW-2 CW-5**

| | | |
|---|---|---|
| ಸಾಕ್ಷಿದಾರನ ಹೆಸರು | : | ಉಮಾದೇವಿ @ ಮಲ್ಲಮ್ಮ ಗಂಡ ಗಂಗಣ್ಣ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಮಲದಕಲ್ |
| ಪ್ರಮಾಣಿಕರಿಸಿದ ದಿನಾಂಕ | : | 02-08-2024 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ನನಗೆ ಆರೋಪಿತರ ಪರಿಚಯ ಇದೆ. ಚಾಸಾ-1 ನನ್ನ ಮಗಳು. ಚಾಸಾ-4 ನನ್ನ ಗಂಡ. ಚಾಸಾ-2, 3, 6 ಮತ್ತು 7 ರವರ ಪರಿಚಯ ಇದೆ. ದಿನಾಂಕ 22-01-2023 ರಂದು ಆರೋಪಿತರು ಬಂದು ನನಗೆ ಹಾಗೂ ಚಾಸಾ-1 ರವರಿಗೆ ಹೊಡೆದಿರುತ್ತಾರೆ ಹಾಗೂ ಬಿಡಿಸಲು ಬಂದ ಚಾಸಾ-4 ರವರಿಗೂ ಸಹ ಆರೋಪಿತರು ಹೊಡೆದಿರುತ್ತಾರೆ. ಆರೋಪಿತರು ಚಾಸಾ-1 ರವರ ನಿಶ್ಚಿತಾರ್ಥದ ವಿಷಯವಾಗಿ ನಮಗೆ ಹೊಡೆ-ಬಡೆ ಮಾಡಿ ಚಾಸಾ-1 ರವರ ಕೂದಲು ಹಿಡಿದು ಎಳೆದಾಡಿರುತ್ತಾರೆ. ಚಾಸಾ-1 ರವರನ್ನು ತಮ್ಮ ಮನೆಗೆ ಕೊಟ್ಟು ಮದುವೆ ಮಾಡಬೇಕೆಂದು ಜೀವ ಬೆದರಿಕೆ ಹಾಕಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎಮ್.ಆರ್ ವಕೀಲರಿಂದ.**

ಆರೋಪಿತರು ನಮಗೆ ಹಳೆಯ ಸಂಬಂಧಿಕರು ಎಂದರೆ ನಿಜ. 1 ನೇ ಆರೋಪಿ ಸುಮಾರು 3-4 ವರ್ಷಗಳಿಂದ ಶರಣಗೌಡ ಕಂದಕೂರ ಎಮ್.ಎಲ್.ಎ ರವರ ಕಾರು ಚಾಲಕನಾಗಿ ಬೆಂಗಳೂರಿನಲ್ಲಿ ವಾಸವಿರುತ್ತಾರೆ ಎಂದರೆ ನಿಜ, ಸಾಕ್ಷಿ ಮುಂದುವರೆದು ಊರಿಗೆ ಬಂದು ಹೋಗಿ ಮಾಡುತ್ತಾರೆ ಎಂದು ಹೇಳುತ್ತಾರೆ. 2 ನೇ ಆರೋಪಿ ಪುನಾದಲ್ಲಿ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ಚಾಸಾ-1 ರವರನ್ನು 1 ನೇ ಆರೋಪಿಗೆ ಕೊಟ್ಟು ಮದುವೆ ಮಾಡಬೇಕೆಂದು ಆರೋಪಿತರು ನಮ್ಮನ್ನು ಸಾಕಷ್ಟು ಬಾರಿ ಕೇಳಿಕೊಂಡಿದ್ದರು ಎಂದರೆ ನಿಜ, ಆದರೆ ನಾವು ಕೊಡುವುದಿಲ್ಲ ಎಂದು ಹೇಳಿದ್ದೇವು ಎಂದು ಹೇಳುತ್ತಾರೆ. ಆದಕಾರಣ ನಮ್ಮ ಹಾಗೂ ಆರೋಪಿತರ ಮನಸ್ಸು ಸರಿ ಇರುವುದಿಲ್ಲ ಮತ್ತು ನಾವುಗಳು ಪರಸ್ಪರ ಮಾತನಾಡುವುದಿಲ್ಲ ಎಂದರೆ ನಿಜ. ನಾನು ಟೇಲರಿಂಗ್ ಕೆಲಸ ಮಾಡುತ್ತೇನೆ. ಚಾಸಾ-4 ರವರು ಒಕ್ಕಲುತನ ಮಾಡುತ್ತಾರೆ. ಪಂಚನಾಮೆ ಕಾಲಕ್ಕೆ ಸ್ಥಳದಲ್ಲಿ 4-5 ಜನ ಇದ್ದರು. ಪಂಚನಾಮೆಗೆ

CC No.326/2023
PW-2/CW-5

ನಾನು, ಚಾಸಾ-1 ಮತ್ತು 4 ರವರು ಸಹಿ ಮಾಡಿರುತ್ತೇವೆ. ದಿನಾಂಕ 22-01-2023 ರಂದು ಯಾವುದೇ ಘಟನೆ ಆಗದೇ ಇದ್ದರೂ ಚಾಸಾ-1 ರವರು ಸುಳ್ಳು ದೂರನ್ನು ದಾಖಲು ಮಾಡಿದ್ದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರನ್ನು ಈಗ ಮಸ್ಕಿ ಹತ್ತಿರದ ಜೋಳದರಾಶಿ ಊರಿನವರಿಗೆ ಕೊಟ್ಟು ಮದುವೆ ಮಾಡಿರುತ್ತೇವೆ. 2023 ರಲ್ಲಿ ಚಾಸಾ-1 ರವರು ಅಲ್ಪವ್ಯಯಿ ಆಗಿದ್ದರು ಎಂದರೆ ಸರಿಯಲ್ಲ. ಚಾಸಾ-1 ರವರು ದೂರಿನಲ್ಲಿ ತಾವು ಅಲ್ಪವ್ಯಯಿ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರು ದೂರನ್ನು ಹೊರಗಡೆ ಟೈಪ್ ಮಾಡಿಸಿ ಕೊಟ್ಟಿರುತ್ತಾರೆ. ಚಾಸಾ-1 ರವರು ಅಲ್ಪವ್ಯಯಿ ಆಗಿದ್ದು ಆರೋಪಿತರು ಚಾಸಾ-1 ರವರು ವಯಸ್ಕರಾದ ನಂತರ ಮದುವೆ ಮಾಡಿಕೊಳ್ಳುವುದಾಗಿ ಕೇಳಿಕೊಂಡಿದ್ದರು ಎಂದರೆ ಆಗ ಚಾಸಾ-1 ರವರು ವಯಸ್ಕರಾಗಿದ್ದರು ಎಂದು ಹೇಳುತ್ತಾರೆ. ಚಾಸಾ-1 ರವರು ಅಲ್ಪವ್ಯಯಿ ಇದ್ದಾಗ ನಾವು ಅವರ ನಿಶ್ಚಿತಾರ್ಥ ಮಾಡಿದ್ದೇವು ಎಂದರೆ ಸರಿಯಲ್ಲ. ಚಾಸಾ-1 ರವರ ನಿಶ್ಚಿತಾರ್ಥ ಸುನೀಲ್ ಎಂಬುವವರ ಜೊತೆ ಆಗಿರುತ್ತದೆ ಎಂದರೆ ನಿಜ. ಚಾಸಾ-1 ರವರು ಅಲ್ಪವ್ಯಯಿ ಇದ್ದಾಗ ಯಾವ ಕಾರಣಕ್ಕಾಗಿ ಅವರ ನಿಶ್ಚಿತಾರ್ಥ ಮಾಡಿರುವುದಾಗಿ 3 ಮತ್ತು 4 ನೇ ಆರೋಪಿತರು ನಮ್ಮನ್ನು ಕೇಳಿದ್ದರು ಎಂದರೆ ಸರಿಯಲ್ಲ. ಆಗ ಆರೋಪಿತರು ನಿಶ್ಚಿತಾರ್ಥ ಮಾಡಲು ಬಿಡುವುದಿಲ್ಲ ಎಂದು ಮನಗಂಡು ಆರೋಪಿತರು ಬರಬಾರದು ಎಂದು ಅವರ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಬಗ್ಗೆ ಚಾಸಾ-1 ರವರು ಸುಳ್ಳು ದೂರನ್ನು ದಾಖಲು ಮಾಡಿದ್ದು ಅದಕ್ಕೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಹೊಡೆ-ಬಡೆ ಮಾಡಿ ಕೂದಲು ಹಿಡಿದು ಎಳೆದಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ಆಗದೇ ಇದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.